**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ**
**ರಾಜ್ಯ ಯೋಜನ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡಗಳು**
**ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560001.**

**ಸಂಖ್ಯೆ : ಆರ್.ಎಂ.ಎಸ್.ಎ/ಆವಿ/7-8ನೇತರಗತಿ ದಾಖಲಾತಿ/07/2012-13** **ದಿನಾಂಕ: 18-06-2012**

********ಸುತ್ತೋಲೆ********

**ವಿಷಯ:**-ಆದರ್ಶ ವಿದ್ಯಾಲಯಗಲ್ಲಿ 7 ನೇ ಮತ್ತು 8 ನೇ ತರಗತಿಗಳಿಗೆ ಖಾಲಿ ಇರುವ ಸೀಟುಗಳಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಕುರಿತು.

**ಉಲ್ಲೇಖ:**-ದಿನಾಂಕ 13-06-2012 ರಂದು ನಡೆದ 4ನೇ ಕಾರ್ಯಕಾರಿ ಸಮಿತಿಯ ಸಭೆಯ ನಡಾವಳಿಗಳು.

ಆದರ್ಶ ವಿದ್ಯಾಲಯಗಳಲ್ಲಿ ಪ್ರತಿ ತರಗತಿಗೆ 80 ವಿದ್ಯಾರ್ಥಿಗಳಿಗೆ ಅವಕಾಶವಿರುತ್ತದೆ. 2010-11ನೇ ಸಾಲಿನಲ್ಲಿ ಪ್ರಾರಂಭವಾದ ಈ ಶಾಲೆಗಳಲ್ಲಿ ಹಲವಾರು ಕಾರಣಗಳಿಂದ ಪೂರ್ಣ ಪ್ರಮಾಣದಲ್ಲಿ ವಿದ್ಯಾರ್ಥಿಗಳು ದಾಖಲಾಗದಿರುವುದರಿಂದ ಕೆಲವು ಸೀಟುಗಳು ಖಾಲಿ ಇರುತ್ತದೆ. 2012-13ನೇ ಸಾಲಿನಲ್ಲಿ 7 ಮತ್ತು 8ನೇ ತರಗತಿಗಳಿಗೆ ದಾಖಲಾತಿ ಮಾಡಿಕೊಳ್ಳಲು ಪೋಷಕರು ಕೋರುತ್ತಿರುವುದಾಗಿ ತಿಳಿಸಿರುವ ಹಿನ್ನೆಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅನುಮತಿ ಮತ್ತು ಮಾರ್ಗದರ್ಶನ ಕೋರಿರುತ್ತಾರೆ. ಈ ಬಗ್ಗೆ ಪರಿಶೀಲನೆ ಮಾಡಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಿದೆ.

1 7ನೇ ತರಗತಿಗೆ ದಾಖಲಾತಿ ಬಯಸುವವರು 2011-12ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯದ ಪ್ರವೇಶ ಪರೀಕ್ಷೆ ಬರೆದಿರಬೇಕು. 8ನೇ ತರಗತಿಗೆ ಸದರಿ ಬಯಸುವವರು 2010-11ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯದ ಪ್ರವೇಶ ಪರೀಕ್ಷೆ ಬರೆದಿರಬೇಕು.

2 ಕ್ರಮ ಸಂಖ್ಯೆ 1 ರಲ್ಲಿ ತಿಳಿಸಿರುವ ವಿದ್ಯಾರ್ಥಿಗಳಿಗೆ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಸ್ಥಳೀಯ ದಿನಪತ್ರಿಕೆಗಳಲ್ಲಿ ಸುದ್ದಿ ಹೊರಡಿಸಿ, ಅರ್ಜಿಗಳನ್ನು ಆಹ್ವಾನಿಸಿ ಪ್ರವೇಶ್ ಪರೀಕ್ಷೆ ನಡೆಸಿ, ದಾಖಲಾತಿಗೆ ಅವಕಾಶ ಕಲ್ಪಿಸುವುದು.

3 ರಾಜ್ಯದ ಮೀಸಲಾತಿ ನಿಯಮವನ್ನು ಅನುಸರಿಸುವುದು. ಆಯಾ ವರ್ಗದಲ್ಲಿ ಖಾಲಿಯಿರುವ ಸೀಟುಗಳಿಗೆ ಆಯಾ ವರ್ಗದವರನ್ನೆ ತುಂಬಿಕೊಳ್ಳುವುದು.

2. ಈ ದಾಖಲಾತಿ ಪ್ರಕ್ರಿಯೆಯಲ್ಲಿ ಯಾವುದೇ ಲೋಪದೋಷಗಳು ಆಗದಂತೆ ಕ್ರಮ ಕೈಗೊಳ್ಳುವುದು.

ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಗೌರವಪೂರ್ವಕವಾಗಿ ಮಾಹಿತಿಗಾಗಿ,

1. ಮಾನ್ಯ ಕಾರ್ಯದರ್ಶಿಗಳು ಸಾ.ಶಿ.ಇ. ಬೆಂಗಳೂರು ರವರಿಗೆ ಸಲ್ಲಿಸಿದೆ
2. ಮಾನ್ಯ ಆಯುಕ್ತರು ಸಾ.ಶಿ.ಇ. ಬೆಂಗಳೂರು ರವರಿಗೆ ಸಲ್ಲಿಸಿದೆ
3. ಅಪರ ಆಯುಕ್ತರು ಸಾ.ಶಿ.ಇ. ಧಾರವಾಡ ಮತ್ತು ಗುಲ್ಬರ್ಗಾ ರವರಿಗೆ ಸಲ್ಲಿಸಿದೆ

ಪ್ರತಿಗಳನ್ನು ಸೂಕ್ತ ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು,ಆರ್.ಎಂ.ಎಸ್.ಎ
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ.
4. ರಾಜ್ಯದ ಎಲ್ಲಾ ಆದರ್ಶ ವಿದ್ಯಾಲಯ ಶಾಲೆಯ ಮುಖ್ಯೋಪಾಧ್ಯಾಯರುಗಳಿಗೆ